# ಉಡುಪಿ ಸಂಸ್ಕೃತ ಕಾಲೇಜಿನ ವಿವಿಧ ತರಗತಿಗಳಿಗೆ

# 2022–23 ರ ಪ್ರವೇಶಾತಿ ಪ್ರಾರಂಭ

ಬೆಂಗಳೂರಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಹೊಂದಿರುವ ಉಡುಪಿಯ ಸಂಸ್ಕೃತ ಕಾಲೇಜಿಗೆ ಪ್ರಕೃತ ಶೈಕ್ಷಣಿಕ ವರ್ಷದಲ್ಲಿ ವಿವಿಧ ಕೋರ್ಸುಗಳಿಗೆ ದಾಖಲಾತಿಯು ದಿನಾಂಕ 01.06.2022 ರಿಂದ ಪ್ರಾರಂಭವಾಗಲಿದೆ. ಇಲ್ಲಿ ಪಿ.ಯು.ಸಿ ಗೆ ಸಮಾನವಾದ 2 ವರ್ಷಗಳ ಸಾಹಿತ್ಯ ತರಗತಿ ಹಾಗೂ ಸ್ನಾತಕ ಶಿಕ್ಷಣದಲ್ಲಿ ದ್ವೈತವೇದಾಂತ, ನವೀನನ್ಯಾಯ, ಜ್ಯೌತಿಷ ಮತ್ತು ಅಲಂಕಾರಗಳೆಂಬ ನಾಲ್ಕು ವಿಭಾಗಗಳಿದ್ದು, ಕಳೆದ ವರ್ಷದಿಂದ ಹೊಸ ಶಿಕ್ಷಣ ನೀತಿಯನ್ನು ನಮ್ಮ ಕಾಲೇಜಿನಲ್ಲಿ ಅಳವಡಿಸಿಕೊಂಡಿರುವುದರಿಂದ ಪ್ರತಿ ವಿಭಾಗದಲ್ಲಿಯೂ ಬಿ.ಎ.ಗೆ ಸಮಾನವಾದ ನಾಲ್ಕು ವರ್ಷಗಳ ಅವಧಿಯ ಶಾಸ್ತ್ರಿ ಮತ್ತು ಎಂ.ಎ.ಗೆ ಸಮಾನವಾದ ಒಂದು ವರ್ಷದ ಅಚಾರ್ಯ ಎಂಬ ಕೋರ್ಸ್‌ಗಳಿರುತ್ತವೆ. ಇವುಗಳಿಗೆ ಪ್ರತಿ ವರ್ಷವೂ ಪರೀಕ್ಷೆ ನಡೆಸಲಾಗುತ್ತಿದ್ದು, ಉತ್ತೀರ್ಣರಾದವರಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಮಾಣಪತ್ರಗಳನ್ನು ನೀಡುತ್ತಿದೆ.

ಕಾವ್ಯ ಮತ್ತು ಸಾಹಿತ್ಯ ತರಗತಿಯಲ್ಲಿ ಪಾಸಾದವರು ಅಥವಾ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ತರಗತಿಯಲ್ಲಿ ಸಂಸ್ಕೃತದೊಂದಿಗೆ ಪಾಸಾದವರು ಇಲ್ಲಿ ಪ್ರವೇಶಾವಕಾಶವನ್ನು ಹೊಂದಲು ಅರ್ಹರಾಗಿರುತ್ತಾರೆ. ಮೊದಲು ಸಂಸ್ಕೃತ ಜ್ಞಾನವನ್ನು ಹೊಂದಿಲ್ಲದಿದ್ದರೂ ಮಹಾವಿದ್ಯಾಲಯವು ನಡೆಸುವ ಪ್ರವೇಶಪರೀಕ್ಷೆಯಲ್ಲಿ ಪಾಸಾಗುವವರೂ ಕೂಡಾ ಪ್ರವೇಶಕ್ಕೆ ಅರ್ಹರಾಗುತ್ತಾರೆ. ಪ್ರವೇಶಾತಿ ಅರ್ಜಿಗಳನ್ನು ಕಾಲೇಜಿನ ಕಚೇರಿಯಲ್ಲಿ ಪಡೆಯಬಹುದು ಅಥವಾ ಕಾಲೇಜಿನ Website : www.smspudupi.in ನಿಂದ ಡೌನ್ ಲೋಡ್ ಮಾಡಿಕೊಂಡು ಅಗತ್ಯ ದಾಖಲೆಗಳೊಂದಿಗೆ ಕಾಲೇಜಿಗೆ ಅಂಚೆ ಮೂಲಕವೂ ತಲುಪಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 0820-2521441, 8861292896, 9844029551 ಈ ದೂರವಾಣಿಗಳನ್ನು ಸಂಪರ್ಕಿಸಬಹುದಾಗಿದೆ.

ವಿದ್ಯಾರ್ಥಿ – ವಿದ್ಯಾರ್ಥಿನಿಯರಿಗೆ ಉಚಿತವಾದ ಊಟ ಮತ್ತು ವಸತಿ ವ್ಯವಸ್ಥೆ ಇದ್ದು, ಆಸಕ್ತರು ಕೂಡಲೆ ಸಂಪರ್ಕಿಸಬೇಕಾಗಿ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಪ್ರಾಚಾರ್ಯರು
ಎಸ್.ಎಮ್.ಎಸ್.ಪಿ. ಸಂಸ್ಕೃತ ಕಾಲೇಜು
ಉಡುಪಿ